**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5002/2025**

**ಸಿ.ಡಬ್ಲ್ಯೂ:-4 ಪಿ.ಡಬ್ಲ್ಯೂ:-2**

**ದಿಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ವಿನೋದ ಮಾಯಪ್ಪಾ ಕೆಂಗಾರೆ |
| ವಯಸ್ಸು | : | 39 ವರ್ಷ. |
| ಉದ್ಯೋಗ | : | ಸರ್ಕಾರಿ ನೌಕರ |
| ವಾಸಸ್ಥಳ | : | ನಿಪ್ಪಾಣಿ. |

**ಮುಖ್ಯ ವಿಚಾರಣೆ:-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ಚಾ.ಸಾ 1 ಮತ್ತು 5 ಗೊತ್ತು.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಪ್ಪಾಣಿ ಪೋಲಿಸರು ದಿನಾಂಕಃ 03.10.2024 ರಂದು ನಿಪ್ಪಾಣಿಯ ಬೀಮನಗರದ ಮುನಸಿಪಲ ಹೈಸ್ಕೂಲ ಹಿಂಭಾಗದಲ್ಲಿ ಯಾದವ ಹೌಸ ಮುಂಭಾಗದಲ್ಲಿ ಕರೆಯಿಸಿದ್ದರು. ಅಲ್ಲಿ ಚಾ.ಸಾ.1 ಸೈಪಅಲಿ ಹಾಜರಿದ್ದು ಆತನ ತಮ್ಮ ಅಶ್ರಫಅಲಿಯ ಕೊಲೆ ಮಾಡಿದ ಸ್ಥಳ ಅಂತಾ ತೋರಿಸಿದಾಗ ಪರಿಶೀಲನೆ ಮಾಡಿ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು. ಆಗ ಸಮಯ ಮದ್ಯಾಹ್ನ 3 ರಿಂದ 5 ಗಂಟೆಯಾಗಿತ್ತು.

ಸಾಕ್ಷಿ ಪಂಚನಾಮೆ ಹಾಗೂ ತನ್ನ ಸಹಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿ.ಪಿ.11, ಸಾಕ್ಷಿ ಸಹಿ ನಿ.ಪಿ.11(ಎ) ಅಂತಾ ಗುರುತಿಸಲಾಯಿತು. ಅದೇ ಕಾಲಕ್ಕೆ ನನಗೀಗ ತೋರಿಸಿದ ಮು.ಮಾ.6 ರಿಂದ 10 ನೇದ್ದವುಗಳನ್ನು ಜಪ್ತು ಮಾಡಿಕೊಂಡರು. ನಂತರ ಫೋಟೋಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿ.ಪಿ.3 ರಿಂದ 8 ಛಾಯಾಚಿತ್ರಗಳನ್ನು ತೋರಿಸಲಾಗಿ, ಸದರಿ ಪಂಚನಾಮೆ ಕಾಲಕ್ಕೆ ತೆಗೆದಿದ್ದಾಗಿ ನೋಡಿ ಗುರುತಿಸುತ್ತಾರೆ.

3) ದಿನಾಂಕಃ 05.10.2024 ರಂದು ನನ್ನ ಹಾಗೂ ಆಕಾಶ ಸಮಕ್ಷಮ ನಿಪ್ಪಾಣಿಯ ಬಿ. ಇ. ಒ ಕಚೇರಿ ಬಳಿ ಹೋಗಿ ಅಲ್ಲಿ ಯಾವುದೋ ಒಂದು ಟೀಮನ ವ್ಯಕ್ತಿಗಳು ಕೊಲೆ ಮಾಡಲು ಸಂಚು ರೂಪಿಸಿದ್ದಾಗಿ ತೋರಿಸಿದಾಗ ಪರಿಶೀಲನೆ ಮಾಡಿ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು. ಅಲ್ಲಿಯೇ ಇದ್ದ ಒಂದು ಬೈಕ ಹಾಗೂ ತಲವಾರ ಜಪ್ತ ಮಾಡಿಕೊಂಡರು. ಸಾಕ್ಷಿಗೆ ಪಂಚನಾಮೆ ಹಾಗೂ ತನ್ನ ಸಹಿ ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದು, ಪಂಚನಾಮೆಯನ್ನು ನಿ.ಪಿ.12 ಹಾಗೂ ಸಾಕ್ಷಿ ಸಹಿ ನಿ.ಪಿ.12(ಎ) ಅಂತಾ ಗುರುತಿಸಲಾಯಿತು. ಅದೇ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಟ್ಟು 11 ಛಾಯಾಚಿತ್ರಗಳನ್ನು ತೋರಿಸಲಾಗಿ,

ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.13 ರಿಂದ 23 ಅಂತಾ ಗುರುತಿಸಲಾಯಿತು.

4) ದಿನಾಂಕಃ 07.10.2024 ರಂದು ನಿಪ್ಪಾಣಿ ಪೋಲಿಸರು ಕೊಲಾಪೂರ ಜಿಲ್ಲೆಯ ಮುಶಿಂಗೆ ಗ್ರಾಮಕ್ಕೆ ಕರೆದುಕೊಂಡು ಹೋಗಿ ಹೆಗಡೆಯವರ ಮನೆ ಮುಂದೆ ಇದ್ದ ಒಂದು ಬೈಕನ್ನು ಜಪ್ತು ಮಾಡಿಕೊಂಡರು. ಟೀಮನವರು ಗಾಡಿ ತೋರಿಸಿದರು. ಆ ಗಾಡಿ ನಂಬರ ಗೊತ್ತಿಲ್ಲ. ಆಗ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು. ಸಾಕ್ಷಿಗೆ ಪಂಚನಾಮೆ ಹಾಗೂ ತನ್ನ ಸಹಿ ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದು, ಪಂಚನಾಮೆಯನ್ನು ನಿ.ಪಿ.24 ಹಾಗೂ ಸಾಕ್ಷಿ ಸಹಿ ನಿ.ಪಿ.24(ಎ) ಅಂತಾ ಗುರುತಿಸಲಾಯಿತು. ಅದೇ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಟ್ಟು 5 ಛಾಯಾಚಿತ್ರಗಳನ್ನು ತೋರಿಸಲಾಗಿ, ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.25 ರಿಂದ 29 ಅಂತಾ ಗುರುತಿಸಲಾಯಿತು.

5) ಆ ಎರಡೂ ಪಂಚನಾಮೆಗಳ ಕಾಲಕ್ಕೆ ಯಾರು ಜಾಗ ತೋರಿಸಿದರು ಹಾಗೂ ಪಂಚನಾವೆಗಳಲ್ಲಿ ಎನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ**

**ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ದಿನಾಂಕಃ 05.10.2024 ರಂದು ಸಂಜೆ 05.00 ಗಂಟೆ ಸುಮಾರಿಗೆ ನಿಪ್ಪಾಣಿ ಪೋಲಿಸರು ನನ್ನನ್ನು ಹಾಗೂ ಚಾ.ಸಾ.5 ಆಕಾಶ ಕಾಂಬಳೆಯವರನ್ನು ಠಾಣೆಗೆ ಕರೆಸಿ 3, 4, 7 ರಿಂದ 11 ನೇ ಆರೋಪಿತರನ್ನು ತೋರಿಸಿ, ಅವರನ್ನು ವಿಚಾರಿಸಿ, ಅವರು ಕರೆದುಕೊಂಡು ಹೋಗಿ ತೋರಿಸುವ ಸ್ಥಳಗಳಲ್ಲಿ ಪಂಚರಾಗಿ ಸಹಕರಿಸಲು ನಮ್ಮನ್ನು ಕೇಳಿಕೊಂಡರು ಎಂದರೆ ಸರಿ. ಅದಕ್ಕೆ ನಾವು ಒಪ್ಪಿ ಕೊಂಡೆವು ಎಂದರೆ ಸರಿ. ನಂತರ ಸಂಜೆ 04.15 ಗಂಟೆಗೆ ನಾವೆಲ್ಲ ಠಾಣೆಯಿಂದ ಹೊರಟು ಸದರಿ ಆರೋಪಿತರು ಕರೆದುಕೊಂಡು ಹೋಗಿ ತೋರಿಸಿದ ನಿಪ್ಪಾಣಿ ಶಹರದ ಬಿ ಇ ಒ ಕಚೇರಿ ಆವರಣದ ಮರಾಠಿ ಶಾಲೆಯ ಕಟ್ಟಡದ ಮುಂದಿನ ಬಾಜು ಕಟ್ಟೆಯ ಬಳಿ ಕರೆದುಕೊಂಡು ಹೋಗಿ ಅಲ್ಲಿಯೇ ಕುಳಿತು ಆಶ್ರಫಅಲಿ ಕೊಲೆ ಮಾಡಬೇಕು ಅಂತಾ ನಾವೆಲ್ಲ ಒಳಸಂಚು ರೂಪಿಸಿದ್ದಾಗಿ ಆರೊಜಾೀಪಿತರು ಸ್ಥಳ ತೋರಿಸಿದರು ಎಂದರೆ ಸರಿ. ಆಗ ಸಮಯ ಸಂಜೆ 04.15 ರಿಂದ 04.35 ಗಂಟೆಯಾಗಿತ್ತು ಎಂದರೆ ಸರಿ. ಅದಾದ ನಂತರ ಅಲ್ಲಿಯೇ ಸಮೀಪದಲ್ಲಿರುವ ಮುನಸಿಪಲ ಶಾಲೆಂದು ಹತ್ತಿರ ಇರುವ ಪತ್ರಾಸ ಶೆಡ್ಡ ಬಳಿ ಕರೆದುಕೊಂಡು ಹೋಗಿ ಅಲ್ಲಿಯೇ ಆಶ್ರಫಅಲಿಯನ್ನು ಕೊಲೆ ಮಾಡುವ ಸಲುವಾಗಿ ಕಾಯುತ್ತಾ ಕುಳಿತಿದ್ದಾಗಿ ಸದರಿ ಆರೋಪಿತರು ತೋರಿಸಿದರು

ಎಂದರೆ ಸರಿ. ಅದನ್ನು ಪರಿಶೀಲನೆ ಮಾಡಿಕೊಂಡು ಪಂಚನಾಮೆಯಲ್ಲಿ ಬರೆದುಕೊಂಡರು ಎಂದರೆ ಸರಿ. ಆಗ ಸಮಯ ಸಂಜೆ 04.50 ರಿಂದ 05.00 ಗಂಟೆಯಾಗಿತ್ತು ಎಂದರೆ ಸರಿ. ನಂತರ ಜಲಕುಂಭದ ಬಳಿ ಕರೆದುಕೊಂಡು ಹೋಗಿ ಅಲ್ಲಿಯೇ ಆಶ್ರಫಅಲಿಯನ್ನು ಆಯುಧಗಳಿಂದ ಮೊದಲನೇ ದಾಳಿ ಮಾಡಿದ್ದಾಗಿ ತೋರಿಸಿದರು ಎಂದರೆ ಸರಿ. ಆಗ ಸಮಯ ಸಂಜೆ 05.05 ಗಂಟೆಯಿಂದ 05.25 ಗಂಟೆಯಾಗಿತ್ತು ಎಂದರೆ ಸರಿ. ಆ ಕುರಿತು ಪಂಚನಾಮೆಯಲ್ಲಿ ಬರೆದುಕೊಂಡರು ಎಂದರೆ ಸರಿ. ನಂತರ ಸಮೀಪದ ಉರ್ದು ಶಾಲೆಯ ಹಿಂದಿನ ಬಾಜು ಸಾರ್ವಜನಿಕ ರಸ್ತೆ ಮೇಲೆ ಮೃತ ಆಶ್ರಫಅಲಿಗೆ ಹೊಡೆದು ಕೆಳಗೆ ಕೆಡವಿದ ಜಾಗ ಅಂತಾ ತೋರಿಸಿದಾಗ ಪರಿಶೀಲನೆ ಮಾಡಿ ಪಂಚನಾಮೆಯಲ್ಲಿ ಬರೆದುಕೊಂಡರು ಎಂದರೆ ಸರಿ. ಆಗ ಸಮಯ ಸಂಜೆ 05.30 ರಿಂದ 05.45 ಗಂಟೆಯಾಗಿತ್ತು ಎಂದರೆ ಸರಿ. ನಂತರ 3ನೇ ಆರೋಪಿ ಗುನ್ಹೆಗೆ ಉಪಯೋಗಿಸಿದ ಗುಪ್ತಿ ಆಯುಧ, ತಲವಾರ ಹಾಗೂ ಮೋಟಾರಸೈಕಲನ್ನು ತೋರಿಸುವುದಾಗಿ ಹೇಳಿ ಮುನಸಿಪಲ ಶಾಲೆಯ ಹಿಂದಿನ ಬದಿಯಲ್ಲಿರುವ ಗಿಡಗಂಟಿಗಳಲ್ಲಿ ಬಚ್ಚಿಟ್ಟಿದ್ದ ನನಗೀಗ ತೋರಿಸಿದ 1) ಗುಪ್ತಿ ಆಯುಧ 2) ತಲವಾರನೇದ್ದವುಗಳನ್ನು ಹಾಗೂ ನನಗೀಗ ತೋರಿಸಿದ ನಿ.ಪಿ.23 ರಲ್ಲಿ ಕಂಡು ಬರುವ ಮೋಟಾರಸೈಕಲ ತೋರಿಸಿದರು ಎಂದರೆ ಸರಿ. ಸದರಿ ಸ್ಥಳದಿಂದ ಸದರಿ ವಸ್ತುಗಳನ್ನು ಜಪ್ತು ಮಾಡಿಕೊಂಡು ಪಂಚನಾಮೆಯಲ್ಲಿ ಬರೆದುಕೊಂಡರು ಎಂದರೆ ಸರಿ. ಆಗ ಸಮಯ ಸಂಜೆ 05.50 ರಿಂದ 06.30 ಗಂಟೆಯಾಗಿತ್ತು

ಎಂದರೆ ಸರಿ. ಸದರಿ ಆಯುಧಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ.2 ಮತ್ತು 5 ಅಂತಾ ಗುರುತಿಸಲಾಗಿದೆ. ಆ ಕಾಲಕ್ಕೆ ನಿ.ಪಿ.12 ರಂತೆ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು ಹಾಗೂ ನನಗೀಗ ತೋರಿಸಿದ ನಿ.ಪಿ. 13 ರಿಂದ 23 ನೇದ್ದವುಗಳಂತೆ ಛಾಯಾಚಿತ್ರಗಳನ್ನು ಆಯಾ ಸ್ಥಳಗಳಲ್ಲಿ ತೆಗೆದುಕೊಂಡರು ಎಂದರೆ ಸರಿ.

2) ದಿನಾಂಕಃ 07.10.2024 ರಂದು ಪಂಚರಾದ ನನ್ನ ಹಾಗೂ ಚಾ.ಸಾ.5 ರವರ ಸಮಕ್ಷಮ 3, 9ನೇ ಆರೋಪಿತರು ಕರೆದುಕೊಂಡು ಹೋಗಿ ತೋರಿಸಿದ ಮುಡಶಿಂಗೆ ಗ್ರಾಮದ ಹೆಗಡೆಯವರ ಮನೆಯ ಮುಂದೆ ನಿಲ್ಲಿಸಿದ ಕೃತ್ಯಕ್ಕೆ ಬಳಸಿದ್ದೆನ್ನಲಾದ ಮೋಟಾರಸೈಕಲ ನಂಃ ಕೆಎ 23 ಇಟಿ 5399 ನೇದ್ದನ್ನು ತೋರಿಸಿದಾಗ ಜಪ್ತು ಮಾಡಿಕೊಂಡು ನಿ.ಪಿ.24 ರಂತೆ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು ಹಾಗೂ ನಿ.ಪಿ.25 ರಿಂದ 29 ಛಾಯಾಚಿತ್ರಗಳನ್ನು ತೆಗೆದುಕೊಂಡರು ಎಂದರೆ ಸರಿ. ಸಾಕ್ಷಿ ಸದರಿ ಮೋಟಾರಸೈಕಲನ್ನು ನಿ.ಪಿ.25 ರಿಂದ 29 ನೇದ್ದವುಗಳಲ್ಲಿ ನೋಡಿ ಗುರುತಿಸುತ್ತಾರೆ.

3) ಈ ಎರಡೂ ಪಂಚನಾಮೆಗಳ ಕಾಲಕ್ಕೆ ನನ್ನ ಜೊತೆ ಚಾ.ಸಾ.5 ಆಕಾಶ ಕೂಡ ಹಾಜರಿದ್ದು ಸಹಿ ಮಾಡಿದ್ದಾನೆ ಎಂದರೆ ಸರಿ.

**ಪಾಟೀ ಸವಾಲುಃ– 5, 7 ರಿಂದ 9ನೇ ಆರೋಪಿತರ ಪರ:– ಶ್ರೀ ಎಮ್. ಬಿ. ಪಿ. ವಕೀಲರಿಂದಃ–**

1) ಪಂಚನಾಮೆಗಳಲ್ಲಿ ವಿವರವಾಗಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಪಂಚನಾಮೆಗಳನ್ನು ಯಾರು, ಎಲ್ಲಿ ಹಾಗೂ ಎಷ್ಟು ಸಮಯದಲ್ಲಿ ಬೆರಳಚ್ಚು ಮಾಡಿದರು ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿ. ಅದೇ ರೀತಿ ಪೋಟೋಗಳನ್ನು ಯಾವ ಪೋಟೋ ಸ್ಟುಡಿಯೋದಲ್ಲಿ ತೆಗೆದರು ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತರ ಹೆಸರು, ವಿಳಾಸ ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲಿಸರು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ. ಮೇಲೆ ಹೇಳಿದಂತೆ ಆರೋಪಿತರು ಯಾವುದೇ ಸ್ಥಳಗಳಿಗೆ ಕರೆದುಕೊಂಡು ಹೋಗಿ ಯಾವುದೇ ಸ್ಥಳಗಳನ್ನು ಹಾಗೂ ಗುನ್ನೆಗೆ ಸಂಬಂಧಿಸಿದಂತೆ ಯಾವುದೇ ಆಯುಧಗಳನ್ನು, ವಾಹನಗಳನ್ನು ತೋರಿಸಿಲ್ಲವಾದರೂ ಕೂಡಾ ಪೋಲಿಸರ ಮಾತು ಕೇಳಿಕೊಂಡು ಕೇವಲ ಛಾಯಾಚಿತ್ರಗಳಲ್ಲಿ ನಿಂತುಕೊಂಡು ಪಂಚನಾಮೆಗಳಿಗೆ ಸಹಿ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ಈ ಸಾಕ್ಷಿಯ ಸಾಕ್ಷ್ಯದ ಸಮಯದಲ್ಲಿ 1 ರಿಂದ 5, 7, 8 ನೇ ಆರೋಪಿತನನ್ನು ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರಪಡಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.